**ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ,**
**ವಿರಾಜಪೇಟೆ**
**ಸಿ. ಸಿ. ನಂ:503/2018**

ಪಿಡಬ್ಲ್ಯು: **11**
ಸಿಡಬ್ಲ್ಯು: 11

**ದಿನಾಂಕ: 28-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದು ಮುಖ್ಯ ವಿಚಾರಣೆ: ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

1. ನಿಪಿ-13 ಮತ್ತು ನಿಪಿ-14 ರಲ್ಲಿ ಕಾಣುತ್ತಿರುವ ಆಭರಣಗಳು ಬಂಗಾರದ ಆಭರಣಗಳು ಎಂದು ನಾನು ಪರಿಶೀಲನೆ ಮಾಡಿರುತ್ತೇನೆ. ಸಾಕ್ಷಿಯು 6 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-31 ರಿಂದ ನಿಪಿ-36 ಎಂದು ಗುರುತಿಸಲಾಯಿತು.

**ಮುಖ್ಯ ವಿಚಾರಣೆ : ಮುಕ್ತಾಯ**

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲು : ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

1. ದಿ:16.11.2013 ರಂದು ಬೆಳಿಗ್ಗೆ 8.00 ಗಂಟೆಯಿಂದ 9.30 ರವರೆಗೆ ಪೋಲೀಸರು ಕಳುವಾದ ಬಂಗಾರವರನ್ನು ಪರಿಶೀಲನೆ ಮಾಡಲು ಜನತಾ ನಗರ್, ಮೈಸೂರಿಗೆ ಕರೆದಿರುತ್ತಾರೆ ಎಂದರೆ ಸರಿ. ಅಲ್ಲಿ ಹೋಗಿ ಕ್ರ.ಸಂ.1 ಒಂದು ಜೊತೆ ಚಿನ್ನದ ಜುಮುಕಿ ತೂಕ 4 ಗ್ರಾಂ 940 ಮಿಲಿ. ಕ್ರ.ಸಂ.2 ಒಂದು ಚಿನ್ನದ ಉಂಗುರ 4 ಗ್ರಾಂ 120 ಮಿಲಿ, ಕ್ರ.ಸಂ.3 ಒಂದು ಜೊತೆ ಚಿನ್ನದ ಓಲೆ 4 ಗ್ರಾಂ 400 ಮಿಲಿ, ಕ್ರ.ಸಂ.4 ಎರಡು ಸಣ್ಣ ಉಂಗುರಗಳು ಅವುಗಳತ ೂಕ 2 ಗ್ರಾಂ 340 ಮಿಲಿ, ಕ್ರ.ಸಂ.5 ಎರಡು ಸಣ್ಣ ಉಂಗುರಗಳು 1 ಗ್ರಾಂ 440 ಮಿಲಿ, ಕ್ರ.ಸಂ.6 ಮೂರು ಜೊತೆ ಬೆಳ್ಳಿಯ ಕಾಲುಚೈನು, 134 ಗ್ರಾಂ 830 ಮಿಲಿ, ಕ್ರ.ಸಂ.7 ಒಂದು ಬೆಳ್ಳಿಯ ಉಡಿದಾರ, 12 ಗ್ರಾಂ 130 ಮಿಲಿ ಕ್ರ.ಸಂ.8 ಚಿನ್ನದ 5 ಸಣ್ಣ ಉಂಗುರಗಳು, 4 ಗ್ರಾಂ 355 ಮಿಲಿ, ಕ್ರ.ಸಂ.9 ಚಿನ್ನದ 1 ಸಣ್ಣ ಉಂಗುರಗಳು, 1 ಗ್ರಾಂ 70 ಮಿಲಿ ಇವುಗಳನ್ನು ನಾನು ತಪಾಸಣೆ ಮಾಡಿರುತ್ತೇನೆ ಎಂದರೆ ಸರಿ. ಅದೇ ಸಮಯದಲ್ಲಿ ಚಾಸಾ-9, ಚಾಸಾ-10, ಚಾಸಾ-12 ಮತ್ತು ಚಾಸಾ-13 ರವರು ಕೂಡ ಇದ್ದರು ಎಂದರೆ ನನಗೆ ನೆನಪಿಲ್ಲ.

ಈ ಎಲ್ಲಾ ವಸ್ತುಗಳನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

2. ದಿನಾಂಕಃ 16.11.2013 ರಂದು ಬೆಳಿಗ್ಗೆ 11.30 ಯಿಂದ ಮಧ್ಯಾಹ್ನ 1.15 ಗಂಟೆಯವರೆಗೆ ಪೋಲೀಸರು ನನ್ನನ್ನು ಅಶ್ವಿನಿ ಜುವೆಲ್ಲರಿ ಅಂಗಡಿ, 2ನೇ ಸ್ಟೇಜ್, ಗೋಕುಲಂ, ಮೈಸೂರು ನಗರಕ್ಕೆ ಕರೆದುಕೊಂಡು ಹೋಗಿದ್ದಾರೆ ಎಂದರೆ ಸರಿ. ನಂತರ ಪೋಲೀಸರು ಕೆಳಗಿನ ಬಂಗಾರ ಆಭರಣಗಳನು ತೋರಿಸಿರುತ್ತಾರೆ. ಅವುಗಳು ಕ್ರ.ಸಂ.1 ಒಂದು ಜೊತೆ ಚಿನ್ನದ ಓಲೆ ಮತ್ತು ಜುಮ್ಕಿ, 10 ಗ್ರಾಂ 500 ಮಿಲಿ, ಕ್ರ.ಸಂ.2 ಒಂದು ಜೊತೆ ಚಿನ್ನದ ಬಳೆ, 15 ಗ್ರಾಂ 960 ಮಿಲಿ, ಕ್ರ.ಸಂ.3 ಒಂದು ಜೊತೆ ಚಿನ್ನದ ಬಳೆ, 16 ಗ್ರಾಂ, ಕ್ರ.ಸಂ.4 ಚಿನ್ನದ ರೋಪ್ ಚೈನು, 11 ಗ್ರಾಂ 40 ಎಂ.ಎಲ್, ಕ್ರ.ಸಂ.5 ಸಣ್ಣ ಚಿನ್ನದ ಚೈನು, 6 ಗ್ರಾಂ 60 ಮಿಲಿ, ಕ್ರ.ಸಂ.6 ಬ್ರೈಸ್ ಲೇಟ್, 14 ಗ್ರಾಂ 870 ಮಿಲಿ, ಕ್ರ.ಸಂ.7 ಕೊಕ್ಕೆತಾತಿ, 8 ಗ್ರಾಂ 820 ಮಿಲಿ, ಕ್ರ.ಸಂ.8 ನೆಕ್ಲೆಸ್ 8 ಗ್ರಾಂ 710 ಮಿಲಿ, ಕ್ರ.ಸಂ.9 ಬಿಳಿ ಹರಳಿನ ಚಿನ್ನದ ಉಂಗುರ, 4 ಗ್ರಾಂ 230 ಮಿಲಿ, ಕ್ರ.ಸಂ.10 ಒಂದು ಚಿನ್ನದ ಉಂಗುರ, 5 ಗ್ರಾಂ 770 ಮಿಲಿ, ಕ್ರ.ಸಂ.11 ಒಂದು ಚಿನ್ನದ ಕಡಗ, 14 ಗ್ರಾಂ 640 ಮಿಲಿ, ಕ್ರ.ಸಂ.12 ಹರಳು ಇರುವ ಒಂದು ಜೊತೆ ಓಲೆ ಮತ್ತು ಜುಮ್ಕಿ 8 ಗ್ರಾಂ 640 ಮಿಲಿ, ಕ್ರ.ಸಂ.13 ಹರಳು ಇರುವ ಓಲೆ, 9 ಗ್ರಾಂ 80 ಮಿಲಿ, ಕ್ರ.ಸಂ.14 ಚಿನ್ನದ 5 ಸಣ್ಣ ಓಲೆಗಳು, 10 ಗ್ರಾಂ 20 ಮಿಲಿ, ಕ್ರ.ಸಂ.15 ಹಸಿರು ಕಲ್ಲಿನ ಒಂದು ಚಿನ್ನದ ಉಂಗುರ, 5 ಗ್ರಾಂ 100 ಮಿಲಿ, ಕ್ರ.ಸಂ.16 ಒಂದು ಚಿನ್ನದ ನಾಣ್ಯ, 4 ಗ್ರಾಂ, ಕ್ರ.ಸಂ.17 ಚಿನ್ನದ 4 ಸಣ್ಣ ಉಂಗುರಗಳು, 4 ಗ್ರಾಂ 110 ಮಿಲಿ, ಕ್ರ.ಸಂ.18 ಬೆಳ್ಳಿಯ ಒಂದು ಕೀ ಬಂಚ್, 4 ಗ್ರಾಂ 190 ಮಿಲಿ, ಕ್ರ.ಸಂ.19 ಬೆಳ್ಳಿಯ 4 ಜೊತೆ ಕಾಲು ಚೈನು, 87 ಗ್ರಾಂ 470 ಮಿಲಿ ಇವುಗಳನ್ನು ಪರಿಶೀಲಿಸಿರುತ್ತೇನೆ ಎಂದರೆ ಸರಿ. ಅದೇ ಸಮಯದಲ್ಲಿ ಚಾಸಾ-9, ಚಾಸಾ-10 ಮತ್ತು ಚಾಸಾ-14 ರವರು ಹಾಜರು ಇದ್ದರು ಎಂದರೆ ಸರಿ. ಅದೇ ಸಮಯದಲ್ಲಿ ನಿಪಿ-13, ನಿಪಿ-14 ಮತ್ತು ನಿಪಿ-31 ರಿಂದ ನಿಪಿ-36 ರವರೆಗೆ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿ. ನಾನು ಮಹಜರನ್ನು ಸರಿಯಾಗಿ ನೋಡಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಆರೋಪಿಯನ್ನು ಮಾಧ್ಯಮದ ಮುಖಾಂತರ ನೋಡಿ ಗುರುತಿಸಿರುತ್ತೇನೆ.

**ಪಾಟೀ ಸವಾಲು ಃ ಮುಕ್ತಾಯ**

**ಮರು ವಿಚಾರಣೆ ಃ ಇಲ್ಲ**

**ಪಾಟೀ ಸವಾಲು ಃ ಆರೋಪಿ ಪರ ವಕೀಲರು ಗೈರುಹಾಜರು ಇದ್ದ ಕಾರಣ ಪಾಟೀಸವಾಲನ್ನು ಮುಂದೂಡಲಾಯಿತು.**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಹಿ/-

**ಪ್ರದೀಪ ಪೋತದಾರ**
**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ**